**2013–14ನೇ ಸಾಲಿನ ಕೃಷಿ ಇಲಾಖೆಯ ಯೋಜನಾ ಕಾರ್ಯಕ್ರಮಗಳಿಗೆ ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ವಿವರ.**

**ರೂ. ಲಕ್ಷಗಳಲ್ಲಿ**

| ಕ್ರ. ಸಂ. | ಯೋಜನೆ | ಲೆಕ್ಕ ಶೀರ್ಷಿಕೆ | ಆಯವ್ಯಯ 2013–14 |
|---|---|---|---|
| 1 | ಕೃಷಿ ನಿರ್ದೇಶನಾಲಯ | 2401–00–001–1–01 | 4000.00 |
| 2 | ಕುಯಿಲು ನಂತರದ ತಂತ್ರಜ್ಞಾನ (0:100) | 2401–00–102–0–06 | 200.00 |
| 3 | ಆಹಾರ ಸಂಸ್ಕರಣೆ ಮೇಲಣ ರಾಷ್ಟ್ರೀಯ ಕಾರ್ಯಾಚರಣೆ (25:75) | 2401–00–102–0–07 | 2720.00 |
| 4 | ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ | 2401–00–103–0–15 | 54292.41 |
| 5 | ಸಾವಯವ ಕೃಷಿ | 2401–00–104–0–12 | 4480.54 |
| 6 | ಮಣ್ಣು ಆರೋಗ್ಯ ಕೇಂದ್ರಗಳು–ಜೈವಿಕ ಗೊಬ್ಬರಗಳ ಜನಪ್ರಿಯತೆ | 2401–00–105–0–01 | 300.00 |
| 7 | ಸಸ್ಯ ಸಂರಕ್ಷಣೆ – ಕೀಟನಾಶಕ ನಿಯಂತ್ರಣ ಪ್ರಯೋಗಶಾಲೆ | 2401–00–107–0–03 | 700.00 |
| 8 | ಹತ್ತಿ ಕಿರು ಆಯೋಗ–II (25:75) | 2401–00–108–1–13 | 81.70 |
| 9 | ಲಘು ನೀರಾವರಿ ಯೋಜನೆ (35:40) | 2401–00–108–1–15 | 10000.00 |
| 10 | ಬೇಸಾಯ ಸಂಬಂಧಿತ ಚಟುವಟಿಕೆಗಳು | 2401–00–109–0–21 | 9270.00 |
| 11 | ಎಣ್ಣೆ ಕಾಳುಗಳ ಉತ್ಪಾದನಾ ಕಾರ್ಯಕ್ರಮ (25:75) | 2401–00–114–0–01 | 1392.32 |
| 12 | ಜಿಲ್ಲಾ ಪಂಚಾಯತ್‌ಗೆ ಸಹಾಯಧನ | 2401–00–196–1–01 | 2266.75 |
| 13 | ಜಿಲ್ಲಾ ಪಂಚಾಯತ್‌ಗೆ ಸಹಾಯಧನ - ISOPOM | 2401–00–196–6–13 | 1724.99 |
| 14 | ತಾಲ್ಲೂಕು ಪಂಚಾಯತ್‌ಗೆ ಸಹಾಯಧನ | 2401–00–197–1–01 | 200.45 |
| 15 | ಇತರೆ ಕೃಷಿ ಯೋಜನೆಗಳು | 2401–00–800–1–40 | 15900.00 |
| 16 | ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ (10:90) | 2401–00–800–1–53 | 113.03 |
| 17 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (0:100) | 2401–00–800–1–57 | 31000.00 |
| 18 | ರಾಜ್ಯ ಯೋಜನೆಗಳು | 4401–00–001–1–01 | 2535.00 |
| | **ಒಟ್ಟು** | | **141177.19** |

# 2013–14 ನೇ ಸಾಲಿನಲ್ಲಿ ಕೃಷಿ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು

## ರಾಜ್ಯವಲಯ ಯೋಜನೆಗಳು:

**1. ಕೃಷಿ ನಿರ್ದೇಶನಾಲಯ : (2401–00–001–1–01)**

**ಅ. ಕೃಷಿ ನಿರ್ದೇಶನಾಲಯ:** ಈ ಕಾರ್ಯಕ್ರಮದಡಿ ಕೃಷಿ ವಿಸ್ತರಣಾ ಕಾರ್ಯಕ್ರಮ, ನಿರ್ದೇಶನಾಲಯದಲ್ಲಿ ಗಣಕ ಕೇಂದ್ರ, ಯೋಜನೆ ಅಭಿವೃದ್ಧಿ ಮತ್ತು ಸಂಶೋಧನೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು. ಹಾಗೂ ಸಿವಿಲ್ ಕಾಮಗಾರಿಗಳು, ಬಾಡಿಗೆ, ದರ ಮತ್ತು ಕರ, ಲೇಖನಾ ಸಾಮಾಗ್ರಿಗಳ ಖರೀದಿ, ವಿವಿಧ ಕಾರ್ಯಕ್ರಮಗಳ ಗಣಕೀಕರಣ, ಸಾಫ್ಟ್‌ವೇರ್ ಅಭಿವೃದ್ಧಿ, ಅಲ್ಪಾವಧಿ ಸಂಶೋಧನಾ ಅಧ್ಯಯನಗಳನ್ನು ಕೈಗೊಳ್ಳುವುದು, ಕೃಷಿ ನಿರ್ದೇಶನಾಲಯದಲ್ಲಿ ಕಟ್ಟಡಗಳ ನಿರ್ಮಾಣ/ ನವೀಕರಣ, ವಾಹನ ಬಾಡಿಗೆ ಹಾಗೂ ಸಂಚಾರಿ ವಿಸ್ತರಣಾ ಸೇವಾ ವಾಹನಗಳ ಖರೀದಿ, ಕಂಪ್ಯೂಟರ್ ಖರೀದಿ ಹಾಗೂ CUG ಗೆ ವೆಚ್ಚ ಭರಿಸಲಾಗುವುದು.

**ಆ. ಕರ್ನಾಟಕ ಕೃಷಿ ಮಾಹಿತಿ ಪದ್ಧತಿ (ಕೆ–ಕಿಸಾನ್):** ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ (ICT) ಅಳವಡಿಕೆ ಕೃಷಿ ವಿಸ್ತರಣಾ ವ್ಯವಸ್ಥೆಯನ್ನು ಆಧುನೀಕರಣಗೊಳಿಸುವಲ್ಲಿ ಪ್ರಮುಖ ಮೂಲ ಸೌಕರ್ಯಗಳಲ್ಲೊಂದಾಗಿದ್ದು ಕೃಷಿ ಇಲಾಖೆಯು ಈಗಾಗಲೇ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY 2009-10&2010-11) ಹಾಗೂ National E-Govenance Project Agriculture (NEGP-A) ಗಳಡಿ ಹೆಜ್ಜೆಯನ್ನಿಟ್ಟಿದ್ದು ಇಲಾಖೆಯ ನೀಡುತ್ತಿರುವ ಸೇವೆಗಳಾದ ಮಣ್ಣು ಮಾದರಿ ಸಂಗ್ರಹಣೆ, ಪರಿಕರ ವಿತರಣೆ (ಬೀಜ, ಜೈವಿಕ ಗೊಬ್ಬರ,ಕೀಟನಾಶಕಗಳು ಇತ್ಯಾದಿ), ಕೃಷಿ ಯಾಂತ್ರಿಕರಣ, ಲಘು ನೀರಾವರಿ, ಪರವಾನಗಿ, ಉತ್ಪಾದನೆ, ಮಾರುಕಟ್ಟೆ ತಂತ್ರಜ್ಞಾನ ಮಾಹತಿಗಳು, MIS ವರದಿಗಳನ್ನು–ಇ–ಆಡಳಿತದಲ್ಲಿ ತರುವ ಮೂಲಕ ಪಾರದರ್ಶಕತೆ, ರೈತರಿಗೆ ಇ–ಮೇಸೇಜಿಂಗ್ ಮೂಲಕ ಮಾಹಿತಿ ಒದಗಿಸುವುದು, Caller User Groups (CUG) – ಅಧಿಕಾರಿಗಳಿಗೆ ಮೊಬೈಲ್ ನೀಡುವುದು, ಅಕೌಂಟಬಿಲಿಟಿ ಮತ್ತು ವೇಗವನ್ನು ಹೆಚ್ಚಿಸುವ ಹಾಗೂ ಆಡಳಿತ ವೆಚ್ಚವನ್ನು ತಗ್ಗಿಸುವ ನಿಟ್ಟಿನಲ್ಲಿ ಸಹಾಯವಾಗುವುದನ್ನು ಮನಗಂಡು ಕೆ–ಕಿಸಾನ್ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕೃಷಿ ಇಲಾಖೆಯು ಕೆ–ಕಿಸಾನ್ ಕಾರ್ಯಕ್ರಮವನ್ನು ರೈತ ಸಂಪರ್ಕ ಕೇಂದ್ರಗಳಿಂದ ಕೃಷಿ ಸಚಿವಾಲಯದವರೆಗೆ 747 ರೈತ ಸಂಪರ್ಕ ಕೇಂದ್ರಗಳು, 176 ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಕಛೇರಿಗಳು, 23 ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು, 48 ಪ್ರಯೋಗಾಲಯಗಳು, 30 ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಛೇರಿಗಳು, ಕೇಂದ್ರ ಕಛೇರಿಯ 52 ವಿಭಾಗಗಳು ಮತ್ತು ಸಚಿವಾಲಯದವರೆಗೆ ಸರ್ಕಾರಿ–ಖಾಸಗಿ ಸಹಭಾಗಿತ್ವದಲ್ಲಿ (Public-Private partnership) ತ್ರೈಮಾಸಿಕ ಖಾತರಿ ಪಾವತಿಯ ಆಧಾರದಲ್ಲಿ (quarterly Guaranteed Revenue (qGR) payment 5 ವರ್ಷಗಳ ಅವಧಿಗೆ ಹಾಗೂ ಮುಂದುವರೆಸಬಹುದಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

**ಮೇಲಿನ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಕೃಷಿ ನಿರ್ದೇಶನಾಲಯ ಯೋಜನೆಯಡಿ 2013–14 ನೇ ಸಾಲಿಗೆ ರೂ. 4000.00 ಲಕ್ಷಗಳನ್ನು ಒದಗಿಸಲಾಗಿದೆ.**

**2. ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ: (2401–00–103–0–15)**

**ಅ. ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ:** ಈ ಕಾರ್ಯಕ್ರಮದಡಿ ರಿಯಾಯಿತಿ ದರದಲ್ಲಿ ಪ್ರಮುಖ ಬೆಳೆಗಳ ಹೈಬ್ರಿಡ್, ಅಧಿಕ ಇಳುವರಿ ತಳಿಗಳು ಮತ್ತು ತಳಿಗಳ ಉತ್ತಮ ಗುಣಮಟ್ಟದ ಪ್ರಮಾಣಿತ ಹಾಗೂ ನಿಜಚೀಟಿ ಬಿತ್ತನೆ ಬೀಜಗಳನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರಿಯಾಯಿತಿ ದರದಲ್ಲಿ ವಿತರಿಸಲಾಗುವುದು ಹಾಗೂ ಸ್ವಬೀಜಾಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

**ಆ. ಸುವರ್ಣಭೂಮಿ ಯೋಜನೆ:** 2012-13ನೇ ಸಾಲಿನಲ್ಲಿ ಕಡಿಮೆ ಮೌಲ್ಯದ ಬೆಳೆಯಿಂದ ಹೆಚ್ಚು ಮೌಲ್ಯದ ಬೆಳೆ ಅಥವಾ ಕೃಷಿ ಚಟುವಟಿಕೆಗೆ (ದ್ವಿದಳ ಧಾನ್ಯ, ಎಣ್ಣೆಕಾಳು ಮತ್ತು ವಾಣಿಜ್ಯ ಬೆಳೆಗಳು) ಬದಲಿಸಿಕೊಂಡ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಬಾಕಿಯಿರುವ ಎರಡನೇ ಕಂತಿನ ಅನುದಾವನ್ನು ನೀಡಲು ಅನುದಾನವನ್ನು ಒದಗಿಸಿಕೊಳ್ಳಲಾಗಿದೆ.

**ಇ. ಕರ್ನಾಟಕ ಕೃಷಿ ಮಿಷನ್:** ಕೃಷಿ, ಪಶು ಸಂಗೋಪನೆ, ತೋಟಗಾರಿಕೆ, ರೇಷ್ಮೆ ಮತ್ತು ಪೂರಕ ಚಟುವಟಿಕೆಗಳ ಕಾರ್ಯಕಮಗಳನ್ನು ನಿರ್ದೇಶಿಸಲು ಮತ್ತು ಸಮನ್ವಯಗೊಳಿಸಲು ಕರ್ನಾಟಕ ಕೃಷಿ ಮಿಷನ್‌ನ್ನು ರಚಿಸಲಾಗಿದ್ದು, ಈ ಕಾರ್ಯಕ್ರಮದಡಿ ಮಿಷನ್‌ನ ಆಡಳಿತ ವೆಚ್ಚ ಭರಿಸಲಾಗುವುದು.

**ಈ. ಬೀಜ ಹಾನಿ ನಿಧಿ:** ಈ ಕಾರ್ಯಕ್ರಮದಡಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾದ ಕ.ರಾ.ಬೀ.ನಿ., K.O.F ಮತ್ತು ರಾಜ್ಯ ಕೃಷಿ ವಿಶ್ವವಿದ್ಯಾಲಯಗಳು ಕೃಷಿ ಇಲಾಖೆಯ ನಿರ್ದೇಶನದ ಮೇರೆಗೆ ರೈತರಿಗೆ ವಿತರಣೆಗಾಗಿ ಉತ್ಪಾದಿಸಿದ ಬಿತ್ತನೆ ಬೀಜಗಳು ಕಾರಣಾಂತರಗಳಿಂದ ವಿತರಣೆಯಾಗದೆ ಉಳಿದು ಅಂತಹ ಬಿತ್ತನೆ ಬೀಜಗಳಿಗೆ ಬಿತ್ತನೆ ಬೀಜದ ಬೆಲೆ ಮತ್ತು ಬೀಜೇತರವಾಗಿ ವಿಲೇವಾರಿ ಮಾಡಿದ ವ್ಯತ್ಯಾಸದ ಹಣವನ್ನು ಪ್ರಸ್ತಾವನೆ ಸಲ್ಲಿಸಿದ ಸಂಸ್ಥೆಗಳಿಗೆ, ಪರಿಶೀಲಿಸಿ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

**ಉ. ರಾಸಾಯನಿಕ ಗೊಬ್ಬರದ ಮೇಲಿನ ಬಡ್ಡಿ ಸಹಾಯಧನ:** ಈ ಕಾರ್ಯಕ್ರಮದಡಿ ರಸಗೊಬ್ಬರ ಕಾಪು ದಾಸ್ತಾನಿಗೆ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿಗೆ ಮುಂಗಡ ಹಣ ನೀಡಲು ಮತ್ತು ರಸಗೊಬ್ಬರ ಖರೀದಿಯ ಸಾಲಕ್ಕೆ ಬಡ್ಡಿ, ಸಂಗ್ರಹಣಾ ವೆಚ್ಚ ಹಾಗೂ ರಸಗೊಬ್ಬರ ಸಾಗಾಣಿಕಾ ವೆಚ್ಚ ಭರಿಸಲು ಉಪಯೋಗಿಸಲಾಗುವುದು. ರಸಗೊಬ್ಬರವನ್ನು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿಯು ಜಿಲ್ಲೆಯ ವಿವಿಧ ಗೋದಾಮುಗಳಲ್ಲಿ ಸಂಗ್ರಹಣೆ ಮಾಡಬೇಕಾಗಿರುತ್ತದೆ. ಇದಕ್ಕೆ ಅವಧಿಯ ಪ್ರಕಾರ ತಗಲುವ ವೆಚ್ಚವನ್ನು ಭರಿಸಲು ಹಾಗೂ ಕೆಲವು ಜಿಲ್ಲೆಗಳಲ್ಲಿ ಅತ್ಯಂತ ಜರೂರಾಗಿ ರಸಗೊಬ್ಬರ ಬೇಕಾದರೆ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ತಗಲುವ ಸಾಗಾಣಿಕೆ ವೆಚ್ಚವನ್ನು ಭರಿಸಲಾಗುವುದು.

**ಊ. ಮಣ್ಣಿನ ಸತ್ವ ಹೆಚ್ಚಿಸುವಿಕೆ:** ಈ ಕಾರ್ಯಕ್ರಮದಡಿ ಮಣ್ಣಿನ ಸತ್ವ ಹೆಚ್ಚಿಸಲು ಹಾಗೂ ಬಯೋಡೈಜೆಸ್ಟರ್, ಎರೆಹುಳು ಘಟಕ ಸ್ಥಾಪನೆ ಮತ್ತು ಲಘು ಪೋಷಕಾಂಶಗಳನ್ನು ವಿತರಿಸಲಾಗುವುದು.

**ಋ. ನೂತನ ಕೃಷಿ ಉತ್ತೇಜನ ಕಾರ್ಯಕ್ರಮ:** ಈ ಕಾರ್ಯಕ್ರಮದಡಿ ರಿಯಾಯಿತಿ ದರದಲ್ಲಿ ಕೃಷಿ ಸಂಸ್ಕರಣಾ ಉಪಕರಣಗಳು ಮತ್ತು ಕೃಷಿ ಯಂತ್ರೋಪಕರಣಗಳ ವಿತರಣೆ ಮಾಡಲಾಗುವುದು.

**ಮೇಲಿನ ಕಾರ್ಯಕ್ರಮಗಳ ಅನುಷ್ಠಾನಕ್ಕೆ "ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ" ಯೋಜನೆಯಡಿ 2013-14 ನೇ ಸಾಲಿಗೆ ರೂ. 54292.41 ಲಕ್ಷಗಳನ್ನು ಒದಗಿಸಲಾಗಿದೆ.**

**3. ಸಾವಯವ ಕೃಷಿ: 2401-00-104-0-12**

ಕೃಷಿ ಇಲಾಖೆಯು ರಾಜ್ಯದ ಎಲ್ಲ ತಾಲ್ಲೂಕುಗಳಲ್ಲಿ ಒಟ್ಟು 100 ಹೆಕ್ಟೇರ್ ಪ್ರದೇಶದಲ್ಲಿ ಸಾವಯವ ಗ್ರಾಮ ಕಾರ್ಯಕ್ರಮವನ್ನು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಹಮ್ಮಿಕೊಂಡಿರುತ್ತದೆ. ಬೆಳೆ ಉತ್ಪಾದನೆಗೆ ಹೆಚ್ಚಿನ ಸಾವಯವ ಗೊಬ್ಬರವನ್ನು ಬಳಸುವ ನಿಟ್ಟಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಾವಯವ ಗೊಬ್ಬರವನ್ನು ತಯಾರಿಸಿ, ವಿತರಣೆ ಮಾಡುವ ಅವಶ್ಯಕತೆ ಇರುತ್ತದೆ. ಸಾವಯವ ಕೃಷಿ ಗ್ರಾಮ ಯೋಜನೆಯನ್ನು 100 ಹೆಕ್ಟೇರ್ ಪ್ರದೇಶದಲ್ಲಿ ಹೋಬಳಿ ಮಟ್ಟಕ್ಕೆ ವಿಸ್ತರಿಸಲು ಯೋಜಿಸಲಾಗಿದ್ದು, ಸಾವಯವ ಗೊಬ್ಬರಗಳ ತಯಾರಿಕೆ ಮತ್ತು ವಿತರಣೆಗೆ ಉತ್ತೇಜನ, ಆ ಪ್ರದೇಶಗಳಲ್ಲಿ ಬೆಳೆಯು ಸಾವಯವ ಉತ್ಪನ್ನಗಳಿಗೆ ಮಾರುಕಟ್ಟೆ ಸಂಪರ್ಕ ಒದಗಿಸುವ ಕಾರ್ಯವನ್ನೂ ಸಹ ಹಮ್ಮಿಕೊಳ್ಳಲಾಗುವುದು. ಸರ್ಕಾರದಿಂದ ಸಾವಯವ ಗೊಬ್ಬರಗಳ ತಯಾರಿಕೆ ಮತ್ತು ವಿತರಣೆಗೆ ಅವಶ್ಯವಿರುವ ಅನುದಾನವನ್ನು ಭರಿಸಲಾಗುವುದು.

**2013-14 ನೇ ಸಾಲಿಗೆ ಈ ಯೋಜನೆಯ ಅನುಷ್ಠಾನಕ್ಕೆ ರೂ.4480.54 ಲಕ್ಷಗಳನ್ನು ಒದಗಿಸಲಾಗಿದೆ.**

**4. ಮಣ್ಣು ಆರೋಗ್ಯ ಕೇಂದಗಳು-ಜೈವಿಕ ಗೊಬ್ಬರಗಳ ಜನಪ್ರಿಯತೆ: (2401-00-105-0-01)** ಈ ಯೋಜನೆಯಡಿ ರಾಜ್ಯ ಜೈವಿಕ ಗೊಬ್ಬರ ಪ್ರಯೋಗಾಲಯಗಳಲ್ಲಿ ಜೈವಿಕ ಗೊಬ್ಬರಗಳನ್ನು ಉತ್ಪಾದನೆ ಮಾಡಿ

ರೈತರಿಗೆ ವಿತರಿಸಲು ಹಾಗೂ ಸುಸ್ಥಿರ ಕೃಷಿಯನ್ನು ಉತ್ತೇಜಿಸಲು ಜೈವಿಕ ಗೊಬ್ಬರಗಳ ಬಳಕೆಯನ್ನು ಪ್ರಚಾರಗೊಳಿಸಲಾಗುವುದು.

**2013-14 ನೇ ಸಾಲಿಗೆ ಈ ಯೋಜನೆಯ ಅನುಷ್ಠಾನಕ್ಕೆ ರೂ.300.00 ಲಕ್ಷಗಳನ್ನು ಒದಗಿಸಲಾಗಿದೆ.**

**5. ಸಸ್ಯ ಸಂರಕ್ಷಣೆ – ಕೀಟನಾಶಕ ನಿಯಂತ್ರಣ ಪ್ರಯೋಗಶಾಲೆ: (2401-00-107-0-03)**

ಈ ಯೋಜನೆಯಡಿ ರಿಯಾಯಿತಿ ದರದಲ್ಲಿ ಜೈವಿಕ ಪೀಡೆನಾಶಕ ಹಾಗೂ ಜೈವಿಕ ನಿಯಂತ್ರಣಕಾರಕಗಳ ವಿತರಣೆ, ವೈಜ್ಞಾನಿಕ ಧಾನ್ಯ ಸಂಗ್ರಹಣೆಗಾಗಿ ಸುಧಾರಿತ ಪೆಟ್ಟಿಗೆ ವಿತರಣೆ, ರಿಯಾಯಿತಿಯಲ್ಲಿ ರಾಸಾಯನಿಕ ಪೀಡೆನಾಶಕಗಳ ವಿತರಣೆ ಮತ್ತು ಗುಣ ನಿಯಂತ್ರಣದ ಬಗ್ಗೆ ವಿಸ್ತರಣಾ ಸಿಬ್ಬಂದಿ ಹಾಗೂ ರೈತರಿಗೆ ತರಬೇತಿಗಳನ್ನು ಏರ್ಪಡಿಸಲಾಗುತ್ತಿದೆ.

**2013-14 ನೇ ಸಾಲಿಗೆ ಈ ಯೋಜನೆಯ ಅನುಷ್ಠಾನಕ್ಕೆ ರೂ. 700.00 ಲಕ್ಷಗಳನ್ನು ಒದಗಿಸಲಾಗಿದೆ.**

**6. ಬೇಸಾಯ ಸಂಬಂಧಿತ ಚಟುವಟಿಕೆಗಳು: (2401-00-109-0-21)**

**ಅ. ಬೇಸಾಯ ಸಂಬಂಧಿತ ಚಟುವಟಿಕೆಗಳು:** ಈ ಕಾರ್ಯಕ್ರಮದಡಿ ಕೃಷಿ ವಾರ್ತಾ ಘಟಕ, ಕೃಷಿ ಜಾತ್ರೆ, ಮೈಸೂರು ದಸರ ವಸ್ತು ಪ್ರದರ್ಶನ, ಕರ ಪತ್ರಗಳನ್ನು ಮುದ್ರಿಸಲು, ಪ್ರದರ್ಶನಗಳು ಮತ್ತು ಜಿಲ್ಲಾ ಕೃಷಿ ತರಬೇತಿ ಕೇಂದ್ರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು.

**ಆ. ಸಮಗ್ರ ಕೃಷಿ ವಿಸ್ತರಣೆ ಪದ್ಧತಿ:** ಈ ಕಾರ್ಯಕ್ರಮದಡಿ ರೈತ ಸಂಪರ್ಕ ಕೇಂದ್ರಗಳ ಮಟ್ಟದಲ್ಲಿ ರೈತ ಕ್ಷೇತ್ರ ಪಾಠಶಾಲೆಗಳನ್ನು ಏರ್ಪಡಿಸಲು, ರೈತ ಅನುವುಗಾರರಿಗೆ ಸಾಮರ್ಥ್ಯವರ್ಧನೆ, ರೈತರಿಗೆ ಗುರುತಿನ ಚೀಟಿಗಳನ್ನು ವಿತರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು. ಭೂಚೇತನ ಯೋಜನೆಯಡಿ ನಿಯೋಜನೆಗೊಂಡ ರೈತ ಅನುವುಗಾರರಿಗೆ ಸಂಭಾವನೆಯನ್ನು ನೀಡುವುದು, ರೈತರಿಗೆ ತರಬೇತಿ ನೀಡುವುದು, ಗುಚ್ಛ ಗ್ರಾಮಗಳಿಗೆ ಪರಿಕರಗಳ ಸಾಗಾಣಿಕೆಗೆ ಮತ್ತು ಗೋಡೆಬರಹಗಳನ್ನು ಬರೆಸಲು ಅನುದಾನವನ್ನು ವಿನಿಯೋಗಿಸಲಾಗುವುದು.

**ಇ. ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳ ಉನ್ನತೀಕರಣ:** ಈ ಕಾರ್ಯಕ್ರಮದಡಿ ಕೃಷಿ ತರಬೇತಿಗಾಗಿ ಬರುವ ರೈತರಿಗೆ ಮತ್ತು ರೈತ ಮಹಿಳೆಯರಿಗೆ ಉತ್ತಮ ವಾಸ್ತವ್ಯ ಕಲ್ಪಿಸುವ ಸಲುವಾಗಿ ತರಬೇತಿ ಕೇಂದ್ರಗಳ ಮೂಲಭೂತ ಸೌಕರ್ಯಗಳಾದ ವಸತಿನಿಲಯ ನಿರ್ಮಾಣ, ತರಬೇತಿ ಕೊಠಡಿಗಳ ನಿರ್ಮಾಣ/ನವೀಕರಣ, ನೀರಿನ ಸೌಲಭ್ಯ ಒದಗಿಸುವ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ.

ಈ. **ಕೃಷಿ ಮೇಳ:** ಈ ಕಾರ್ಯಕ್ರಮದಡಿ ಕೃಷಿ ಮತ್ತು ಸಂಬಂಧಿತ ಇಲಾಖೆಗಳಾದ ತೋಟಗಾರಿಕೆ, ರೇಷ್ಮೆ, ಅರಣ್ಯ, ಪಶುಸಂಗೋಪನೆ, ಜಲಾನಯನ, ಮೀನುಗಾರಿಕೆ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳ ಸಹಯೋಗದೊಂದಿಗೆ ಸಮಗ್ರ ಕೃಷಿ ಮಾಹಿತಿ ಹಾಗೂ ಎಲ್ಲಾ ಇಲಾಖೆಗಳಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಮಾಹಿತಿಯನ್ನು ಏಕ ಗವಾಕ್ಷಿ ವಿಸ್ತರಣಾ ಪದ್ಧತಿಯಲ್ಲಿ ಪ್ರಚಾರಪಡಿಸಲಾಗುವುದು.

**ಉ. ರೈತರ ಅಧ್ಯಯನ ಪ್ರವಾಸ:** ರೈತರಿಗೆ ವಿಶ್ವದ ವಿವಿಧೆಡೆ ಕೃಷಿ ಮತ್ತು ಸಂಬಂಧಿತ ವಿಷಯಗಳಲ್ಲಿ ಆಗುತ್ತಿರುವ ನವೀನ ಬದಲಾವಣೆಗಳನ್ನು ಪರಿಚಯಿಸಲು ಚೀನಾ ಹಾಗೂ ಇಸ್ರೇಲ್ ದೇಶಗಳಿಗೆ ಪ್ರವಾಸ ಕರೆದೊಯ್ಯಲಾಗುವುದು.

**ಮೇಲಿನ ಕಾರ್ಯಕ್ರಮಗಳ ಅನುಷ್ಠಾನಕ್ಕೆ "ಬೇಸಾಯ ಸಂಬಂಧಿತ ಚಟುವಟಿಕೆಗಳು" ಯೋಜನೆಯಡಿ 2013-14 ನೇ ಸಾಲಿಗೆ ರೂ. 9270.00 ಲಕ್ಷಗಳನ್ನು ಒದಗಿಸಲಾಗಿದೆ.**

**7. ಇತರೆ ಕೃಷಿ ಯೋಜನೆಗಳು: (2401-00-800-1-40)**

ಅ. **ಇತರೆ ಕೃಷಿ ಯೋಜನೆಗಳು:** ಈ ಕಾರ್ಯಕ್ರಮದಡಿ ಉತ್ಪಾದನಾ ಬಹುಮಾನಗಳು, ಸಮಿತಿಗಳು ಮತ್ತು ಸಲಹೆಗಳು, ಕೃಷಿ ಪಂಡಿತ್ ಪ್ರಶಸ್ತಿ, ರೈತರ ಆತ್ಮಹತ್ಯೆ ಪರಿಹಾರಧನ, ಮೈಸೂರಿನ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಗೆ ಸಹಾಯಧನ ಮತ್ತು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಘಟಕಕ್ಕೆ ನೆರವು ನೀಡಲಾಗುವುದು.

**ಆ. ಕೃಷಿ ಬಂಡವಾಳ ಹೂಡಿಕೆ ನಿಧಿ:** ಈ ಕಾರ್ಯಕ್ರಮದಡಿ ಕೃಷಿ ವ್ಯಾಪಾರದಲ್ಲಿ ಖಾಸಗಿ ಹೂಡಿಕೆದಾರರನ್ನು ಪ್ರೋತ್ಸಾಹಿಸಲು ಹಾಗೂ "Global Agri Investors Meet" ಅನ್ನು ಆಯೋಜಿಸಲು ಹಾಗೂ ಕರ್ನಾಟಕ ರಾಜ್ಯ ಕೃಷಿ ವ್ಯಾಪಾರ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ ಸ್ಥಾಪನೆಗೆ ಅನುದಾನವನ್ನು ವಿನಿಯೋಗಿಸಲಾಗುವುದು.

**ಇ. ಹಾವು ಕಡಿತಕ್ಕೆ ಪರಿಹಾರ:** ಹಾವಿನ ಕಡಿತದಿಂದ, ಮರಗಳಿಂದ ಬಿದ್ದು ಅಥವಾ ಇತರೆ ಕೃಷಿ ಸಂಬಂಧಿತ ಆಕಸ್ಮಿಕಗಳಿಂದ ಮರಣ ಹೊಂದಿದ ರೈತರು ಮತ್ತು ಕೃಷಿ ಕಾರ್ಮಿಕರ ಕುಟುಂಬಗಳಿಗೆ ರೂ.1.00 ಲಕ್ಷ ಸಹಾಯ ನೀಡಲಾಗುವುದು ಹಾಗೂ ಬೆಂಕಿ ಆಕಸ್ಮಿಕದಿಂದ ಹುಲ್ಲು ಮೆದೆ/ ಬಣವೆಗಳು ನಷ್ಟವಾದ ಪ್ರಕರಣದಲ್ಲಿ ರೂ.10000/- ದವರೆಗೆ ಪರಿಹಾರ ನೀಡಲಾಗುವುದು.

**ಈ. ಕೃಷಿ ಉತ್ಪನ್ನ ಬೆಲೆ ನಿಗದಿ ಆಯೋಗ (ಹೊಸ ಕಾರ್ಯಕ್ರಮ):** ರಾಷ್ಟ್ರೀಯ ವೆಚ್ಚ ಮತ್ತು ಬೆಲೆ ಆಯೋಗದ (National Commission for Agriculture Costs and Prices) ವ್ಯಾಪ್ತಿಗೆ ಒಳಪಡುವ ಕೃಷಿ ಸರಕುಗಳ ಬೆಲೆ ನೀತಿಯ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡುವುದು, ವೆಚ್ಚ ಮತ್ತು ಬೆಲೆ ಆಯೋಗದ ವ್ಯಾಪ್ತಿಗೆ ಒಳಪಡುವ ಎಲ್ಲ ಬೆಳೆಗಳಿಗೆ ಬೆಂಬಲ ಬೆಲೆಯನ್ನು ಶಿಫಾರಸ್ಸು ಮಾಡುವುದು ಮತ್ತು ಕೃಷಿ ಉತ್ಪನ್ನಗಳ ರಫ್ತು ಪಡೆಯುವಿಕೆ (procurement) ದಾಸ್ತಾನು ಹಾಗೂ ವಿತರಣೆಗಾಗಿ ಕೃಷಿ ಬೆಲೆ ಆಯೋಗವನ್ನು ರಚನೆ ಮಾಡುವುದು. ಆಯೋಗದ ಆಡಳಿತ ವೆಚ್ಚವನ್ನು ಭರಿಸಲಾಗುವುದು.

**ಉ. ಗ್ರಾಮೀಣ ಗೋದಾಮುಗಳಿಗೆ ಬಡ್ಡಿ ಸಹಾಯಧನ (ಹೊಸ ಕಾರ್ಯಕ್ರಮ):** ಪ್ರಮುಖ ಬೆಳೆಗಳ ಉತ್ಪನ್ನಗಳನ್ನು ಹವಾಮಾನ ವೈಪರೀತ್ಯಗಳಿಂದ ಸಂರಕ್ಷಿಸಿ, ವೈಜ್ಞಾನಿಕವಾಗಿ ಸಂಗ್ರಹಣೆ ಮಾಡಿ ಮಾರುಕಟ್ಟೆಯಲ್ಲಿ ಉತ್ತಮ ಧಾರಣೆ ಬಂದಾಗ ಮಾರಾಟ ಮಾಡಲು ಗ್ರಾಮೀಣ ಪ್ರದೇಶಗಳಲ್ಲಿ ಗೋದಾಮುಗಳನ್ನು ನಿರ್ಮಾಣಮಾಡಲು ಮುಂದೆ ಬರುವ ರೈತರು/ ಗುಂಪುಗಳು/ಸರ್ಕಾರೇತರ ಸಂಸ್ಥೆಗಳು, ವಾಣಿಜ್ಯ ಗ್ರಾಮೀಣ ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಿಂದ ಪಡೆದ ಸಾಲದ ಮೇಲಿನ ಬಡ್ಡಿಯನ್ನು ಪಾವತಿಸಲು ಬಡ್ಡಿ ಸಹಾಯಧನವನ್ನು ನೀಡಲಾಗುವುದು.

**ಮೇಲಿನ ಕಾರ್ಯಕ್ರಮಗಳ ಅನುಷ್ಠಾನಕ್ಕೆ "ಇತರೆ ಕೃಷಿ ಯೋಜನೆಗಳು" ಯೋಜನೆಯಡಿ 2013-14 ನೇ ಸಾಲಿಗೆ ರೂ. 15900.00 ಲಕ್ಷಗಳನ್ನು ಒದಗಿಸಲಾಗಿದೆ.**

**8. ರಾಜ್ಯ ಯೋಜನೆಗಳು: (4401-00-001-1-01)**

**ಅ. ಬಂಡವಾಳ ವೆಚ್ಚಗಳು:** ಈ ಕಾರ್ಯಕ್ರಮದಡಿ ಇಲಾಖೆಯ ಹೊಸ ಕಟ್ಟಡಗಳ ನಿರ್ಮಾಣಕ್ಕೆ, ಕಟ್ಟಡಗಳ ನಿರ್ವಹಣೆಗೆ ವೆಚ್ಚ ಭರಿಸಲಾಗುವುದು. .

**ಆ. ರೈತ ಸಂಪರ್ಕ ಕೇಂದ್ರಗಳು:** ರಾಜ್ಯದಲ್ಲಿ ರೈತರಿಗೆ ಅವಶ್ಯವಿರುವ ಕೃಷಿ ಪರಿಕರಗಳು ಹಾಗೂ ತಾಂತ್ರಿಕತೆಯನ್ನು ಒದಗಿಸಲು ಹೋಬಳಿ ಮಟ್ಟದಲ್ಲಿ 745 ರೈತ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಒಟ್ಟು 148 ರೈತ ಸಂಪರ್ಕ ಕೇಂದ್ರಗಳು ಸ್ವಂತ ಕಟ್ಟಡ ಹೊಂದಿವೆ. ಸ್ವಂತ ಕಟ್ಟಡವಿಲ್ಲದ ರೈತ ಸಂಪರ್ಕ ಕೇಂದ್ರಗಳಿಗೆ ನಿವೇಶನ ಖರೀದಿಗೆ ಹಾಗೂ ಕಟ್ಟಡಗಳ ನಿರ್ಮಾಣಕ್ಕೆ ಅನುದಾನವನ್ನು ಉಪಯೋಗಿಸಲಾಗುವುದು.

**ಮೇಲಿನ ಕಾರ್ಯಕ್ರಮಗಳ ಅನುಷ್ಠಾನಕ್ಕೆ "ರಾಜ್ಯ ಯೋಜನೆಗಳು" ಯೋಜನೆಯಡಿ 2013-14 ನೇ ಸಾಲಿಗೆ ರೂ. 2535.00 ಲಕ್ಷಗಳನ್ನು ಒದಗಿಸಲಾಗಿದೆ.**

**ಕೇಂದ್ರ ಯೋಜನಾ ಕಾರ್ಯಕ್ರಮಗಳು:**

**1. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (2401-00-800-1-57)**

ಕೃಷಿ ವಲಯದ ಬೆಳವಣಿಗೆಯನ್ನು ಶೇ.4ಕ್ಕೆ ಹೆಚ್ಚಿಸಲು ಕೇಂದ್ರ ಸರ್ಕಾರವು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯನ್ನು ಎಲ್ಲಾ ರಾಜ್ಯಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯು ಸಂಪೂರ್ಣ ಕೇಂದ್ರ ಪುರಸ್ಕೃತ (100%) ಯೋಜನೆಯಾಗಿರುತ್ತದೆ. ಈ ಯೋಜನೆಯಲ್ಲಿ ರೈತ ಸಂಪರ್ಕ ಕೇಂದ್ರಗಳ ಬಲವರ್ಧನೆ, ಭೂಚೇತನ, ಬೀಜ ಅಭಿಯಾನ, ರೈತ ಶಕ್ತಿ ಗುಂಪು, ಇಲಾಖಾ ಪ್ರಯೋಗಾಲಯಗಳ ಬಲವರ್ಧನೆ, ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ಕೃಷಿ ಯಾಂತ್ರೀಕರಣ ಅಭಿಯಾನ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

**ಈ ಯೋಜನೆಗೆ ರೂ. 31000.00 ಲಕ್ಷಗಳನ್ನು 2013-14 ನೇ ಸಾಲಿಗೆ ಒದಗಿಸಲಾಗಿದೆ.**

**2. ಕುಯಿಲು ನಂತರದ ತಂತ್ರಜ್ಞಾನ: (2401-00-102-0-06)**

ಈ ಯೋಜನೆಯಡಿ ಕುಯಿಲು ನಂತರ ತಂತ್ರಜ್ಞಾನ ಘಟಕಗಳನ್ನು ಸ್ಥಾಪಿಸಲು, ಕುಯಿಲು ನಂತರ ತಂತ್ರಜ್ಞಾನ ಉಪಕರಣಗಳನ್ನು ರೈತರಿಗೆ ವಿತರಿಸಲು, ಕುಯಿಲು ನಂತರ ತಂತ್ರಜ್ಞಾನದ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲು ಹಾಗೂ ರೈತರು, ಉದ್ಯಮಿಗಳು ಹಾಗೂ ವಿಜ್ಞಾನಿಗಳಿಗೆ ತರಬೇತಿ ನೀಡಲು ಅನುದಾನವನ್ನು ವಿನಿಯೋಗಿಸಲಾಗುವುದು

**ಈ ಯೋಜನೆಗೆ ರೂ. 200.00 ಲಕ್ಷಗಳನ್ನು 2013-14 ನೇ ಸಾಲಿಗೆ ಒದಗಿಸಲಾಗಿದೆ.**

**ಕೇಂದ್ರ ಪುರಸ್ಕೃತ ಯೋಜನೆಗಳು:**

**1. ಆಹಾರ ಸಂಸ್ಕರಣೆ ಮೇಲಣ ರಾಷ್ಟ್ರೀಯ ಕಾರ್ಯಾಚರಣೆ: (2401-00-102-0-07)**

ಈ ಯೋಜನೆಯಡಿ ಮೆಗಾ ಫುಡ್ ಪಾರ್ಕ, ಶೀತಲ ಸರಪಳಿ, ಮೌಲ್ಯವರ್ಧನೆ, ಸಂರಕ್ಷಣೆ, ಸರ್ಕಾರಿ ಕಸಾಯಿಖಾನೆಗಳ ಆಧುನೀಕರಣ, ತಂತ್ರಜ್ಞಾನ ಉನ್ನತೀಕರಣ, ವಿಸ್ತರಣೆ, ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆ, ಆಹಾರ ಸುರಕ್ಷಣೆ, ಕೋಡೆಕ್ಸ್, ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ಉತ್ತೇಜನ ಚಟುವಟಿಕೆಗಳು, ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಆಹಾರ ಸಂಸ್ಕರಣಾ ಸಂಸ್ಥೆಗಳ ಬಲವರ್ಧನೆ ಕಾರ್ಯಗಳನ್ನು ಕೈಗೊಳ್ಳಲಾಗುವುದು.

**2013-14 ನೇ ಸಾಲಿಗೆ ಈ ಯೋಜನೆಗೆ ರೂ.2720.00 ಲಕ್ಷಗಳನ್ನು ಒದಗಿಸಲಾಗಿದೆ.**

**2. ಹತ್ತಿಯ ಬಗ್ಗೆ ತಾಂತ್ರಿಕ ಆಯೋಗದಡಿ ಕಿರು ಆಯೋಗ-II: (2401-00-108-1-13)**

ಈ ಯೋಜನೆಯಡಿ ಹತ್ತಿ ಬೆಳೆ ಅಭಿವೃದ್ಧಿಗೆ ಸಂಬಂಧಿಸಿದಂತೆ ನೂತನ ತಾಂತಿಕತೆಗಳ ಅಳವಡಿಕೆ ಕುರಿತು ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದರ ಜೊತೆಗೆ ಅವಶ್ಯವಿರುವ ಪರಿಕರಗಳಾದ ಕೃಷಿ ಯಂತ್ರೋಪಕರಣಗಳು, ಧೃಡೀಕೃತ ಬಿತ್ತನೆ ಬೀಜ, ಲಘು ನೀರಾವರಿ ಉಪಕರಣ ಇತ್ಯಾದಿಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ನೀಡಲಾಗುತ್ತಿದೆ.

**2013-14 ನೇ ಸಾಲಿನಲ್ಲಿ ಈ ಯೋಜನೆಗೆ ರೂ. 81.70 ಲಕ್ಷಗಳನ್ನು ಒದಗಿಸಲಾಗಿದೆ.**

**3. ಎಣ್ಣೆ ಕಾಳುಗಳ ಉತ್ಪಾದನಾ ಕಾರ್ಯಕ್ರಮ: (2401-00-114-0-01)**

ಈ ಯೋಜನೆಯಡಿ ಎಣ್ಣೆಕಾಳು, ದ್ವಿದಳಧಾನ್ಯ ಮತ್ತು ಮುಸುಕಿನ ಜೋಳ ಬೆಳೆಗಳ ಸಮಗ್ರ ಅಭಿವೃದ್ಧಿಗೆ ಬಿತ್ತನೆ ಬೀಜ, ಜೈವಿಕ ಗೊಬ್ಬರ, ಸಸ್ಯ ಸಂರಕ್ಷಣಾ ಔಷಧಿ ಮತ್ತು ಉಪಕರಣ, ಮಣ್ಣು ಸುಧಾರಕಗಳು, ಬೀಜೋತ್ಪಾದನೆ ಇತ್ಯಾದಿ ಘಟಕಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ನೀಡಲಾಗುತ್ತಿದೆ.

**2013-14 ನೇ ಸಾಲಿನಲ್ಲಿ ಈ ಯೋಜನೆಗೆ ರೂ. 3117.31 ಲಕ್ಷಗಳನ್ನು ಒದಗಿಸಲಾಗಿದೆ.**

**4. ಲಘು ನೀರಾವರಿ ಯೋಜನೆ: (2401-00-108-1-15)**

ಈ ಯೋಜನೆಯಡಿ ತುಂತುರು ನೀರಾವರಿ ಹಾಗೂ ಹನಿ ನೀರಾವರಿ ಘಟಕಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ವಿತರಣೆ ಮಾಡಲಾಗುತ್ತಿದೆ.

**2013-14 ನೇ ಸಾಲಿನಲ್ಲಿ ಈ ಯೋಜನೆಗೆ ರೂ. 10000.00 ಲಕ್ಷಗಳನ್ನು ಒದಗಿಸಲಾಗಿದೆ.**

**5. ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ : (2401-00-800-1-53)**

ಈ ಯೋಜನೆಯ ಉದ್ದೇಶ ಕೃಷಿ ವಿಸ್ತರಣೆಯಲ್ಲಿ ತೊಡಗಿರುವ ಕೃಷಿ ಮತ್ತು ಇತರೆ ಅಭಿವೃದ್ಧಿ ಇಲಾಖೆಗಳು, ಸರ್ಕಾರೇತರ ಸಂಘ ಸಂಸ್ಥೆಗಳು, ಸಂಶೋಧನೆ ಹಾಗೂ ತಾಂತ್ರಿಕ ಪ್ರಸಾರ ಘಟಕಗಳ ಮಧ್ಯೆ

ಸಮನ್ವಯ ತರುವ ಮೂಲಕ ರೈತರಿಗೆ ಉತ್ತಮ ಗುಣಮಟ್ಟದ ವಿವಿಧ ಇಲಾಖೆಗಳ ವಿಸ್ತರಣಾ ಸೇವೆ ಹಾಗೂ ನೂತನ ತಂತ್ರಜ್ಞಾನಗಳನ್ನು ಒದಗಿಸುವುದಾಗಿದೆ.

**ಈ ಯೋಜನೆಗೆ ರೂ. 113.03 ಲಕ್ಷಗಳನ್ನು 2013-14 ನೇ ಸಾಲಿಗೆ ಒದಗಿಸಲಾಗಿದೆ.**

**ಜಿಲ್ಲಾವಲಯ ಯೋಜನೆಗಳು :**

ಜಿಲ್ಲಾವಲಯ ಯೋಜನೆಯಡಿ ಈ ಕೆಳಕಂಡ ಯೋಜನೆಗಳನ್ನು ಒಟ್ಟು ರೂ. 2467.20 ಲಕ್ಷಗಳ ಅನುದಾನದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

1. ಕೃಷಿ ಅಭಿವೃದ್ಧಿ ಕೇಂದ್ರಗಳು
2. ರೈತರಿಗೆ ಸಹಾಯಧನ
3. ಹನಿ ನೀರಾವರಿ
4. ಬೇಸಾಯ ಸಂಬಂಧಿತ ಚಟುವಟಿಕೆಗಳು
5. ಕೃಷಿ ಜಾತ್ರೆ ಮತ್ತು ವಸ್ತು ಪ್ರದರ್ಶನ
6. ಕೃಷಿ ಕಚೇರಿ ಕಟ್ಟಡ ನಿರ್ಮಾಣ
7. ಇತರೆ ಕೃಷಿ ಯೋಜನೆ
8. ಸಾವಯವ ಗೊಬ್ಬರ
9. ಸಮೀಕ್ಷಾ ಸಾಧನಾ ಸಾಮಗ್ರಿ